ಆಂಧ್ರಪ್ರದೇಶ ಸರ್ಕಾರವು ಅನಧಿಕೃತವಾಗಿ ನದಿಗಳಿಗೆ ಅಡ್ಡಲಾಗಿ ಒಡ್ಡುಗಳನ್ನು ನಿರ್ಮಿಸುತ್ತಿರುವುದು

ಗೌರ್ ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ನದಿ ಮತ್ತು ಹಳ್ಳಗಳಿಗೆ ಅಡ್ಡಲಾಗಿ ಆಂಧ್ರ ಪ್ರದೇಶ ಸರ್ಕಾರದವರು ಅನಧಿಕೃತವಾಗಿ ಒಡ್ಡುಗಳನ್ನು ನಿರ್ಮಿಸಿ ಕಾಲುವೆ ಮೂಲಕ ಆವರ ಜಮೀನು ಗಳಿಗೆ ನೀರೊದಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ, ಅನಧಿಕೃತವಾಗಿ ನಿರ್ಮಿಸುತ್ತಿರುವುದರ ಬಗ್ಗೆ ಸರ್ಕಾರವು ಕೈಗೊಂಡ ಕ್ರಮ ಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಪಾವಗಡ ತಾಲ್ಲೂಕು ಕೊತ್ತೂರು ಕರಿಯಣ್ಣನ ಕೆರೆಗೆ ಬರುವ ಹಳ್ಳಕ್ಕೆ ಒಡ್ಡು ಕಟ್ಟಿ ಕಾಲುವೆ ಮೂಲಕ ನೀರನ್ನು ಆಂಧ್ರಪ್ರದೇಶದ ಹಿರೇತುರ್ಪಿ ಕೆರೆಗೆ ಹೊರಳಿಸಲು ಪ್ರಯತ್ನಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ಬಗ್ಗೆ ಡಿಸೆಂಬರ್ ೧೯೮೯ರಲ್ಲಿಯೇ ಆಂಧ್ರಪ್ರದೇಶ ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಈ ಅನಧಿಕೃತ ನಿರ್ಮಾಣವನ್ನು ನಿಲ್ಲಿಸಲು ಕೋರಲಾಗಿದೆ. ಕರ್ನಾಟಕದ ಪ್ರದೇಶದಲ್ಲಿ ತೋಡಿರುವ ಕಾಲುವೆಯನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗಿದೆ,

ಶ್ರೀ ಕೆ. ಲಕ್ಕಪ್ಪ.—ನಮ್ಮ ರಾಜ್ಯದ ಅನೇಕ ಭಾಗಗಳಲ್ಲಿ ನದಿ ಮೂಲಗಳು ಏನಿವೆ ಅಲ್ಲಿ ನೀರನ್ನು ಅಕ್ರಮವಾಗಿ ಉಪಯೋಗಿಸತಕ್ಕದ್ದು. ಅಡ್ಡಕಟ್ಟಿಗಳನ್ನು ಹಾಕತಕ್ಕದು, ನೀರನ್ನು ಬಳಸತಕ್ಕದು ಇತ್ಯಾದಿ ದೂರುಗಳನ್ನು ನಮ್ಮ ರಾಜ್ಯದಲ್ಲಿ ಅನೇಕ ವರ್ಷಗಳಿಂದ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಈ ಒಂದು ಉದಾಹರಣೆ ಕೂಡ ಪಾವಗಡ ತಾಲ್ಲೂಕಿನ ಆಂಧ್ರಪ್ರದೇಶದ ಬಾರ್ಡರ್‌ನಲ್ಲಿದೆ. ಸುಮಾರು ಒಂದು ವರ್ಷದಿಂದ ನಮ್ಮ ಪಾವಗಡ ತಾಲ್ಲೂಕಿನ ಕೊತ್ತೂರು ಕರಿಯಣ್ಣನ ಕೆರೆಗೆ ಬರತಕ್ಕ ನೀರನ್ನು ಅಡ್ಡಗಟ್ಟಿ ಆಂಧ್ರಪ್ರದೇಶದ ಹಿರೇತುರ್ಪಿ ಎಂಬ ಕೆರೆಗೆ ಅಕ್ರಮವಾಗಿ ತೆಗೆದುಕೊಳ್ಳುತ್ತಿದ್ದಾರೆ. ಇದು ಅನೇಕ ಸಾರಿ ಸರ್ಕಾರದ ಗಮನಕ್ಕೆ ಬಂದಿದೆ. ತಾವು ತೆಲುಗುಗಂಗಾ, ಕಾವೇರಿ ಯೋಜನೆಗಳ ಬಗ್ಗೆ ಮಾತನಾಡುತ್ತೀರಿ. ನಮ್ಮ ಕಡೆಯಿಂದ ನೀರು ಮದ್ರಾಸಿಗೆ, ಆಂಧ್ರಕ್ಕೆ ಹರಿಯುತ್ತಿದೆ. ನಾವು ಮೊಂಡಾಟಕ್ಕೆ ಹೆದರುತ್ತಿದ್ದೇವೆ. ಆದರೆ ಹಗಲು ರಾತ್ರಿ ಆಂಧ್ರ ಪ್ರದೇಶದವರು ಧಾಳಿ ನಡೆಸುತ್ತಿದ್ದಾರೆ ಮಂತ್ರಿಗಳೇನೋ ಚುರುಕಾಗಿದ್ದೀರಿ, ಆದರೆ ನಿಮ್ಮ ಅಧಿಕಾರಿಗಳು ಮಂದಗತಿಯಲ್ಲಿದ್ದಾರೆ. ಏಕೆಂದರೆ ಅವರಿಗೆ ಹಿಂದಿನ ಸರ್ಕಾರದ ಅನುಭವದಲ್ಲಿ ಕೆಲಸ ಮಾಡಿ ರೂಢಿ, ಹಿಂದಿನ ಸರ್ಕಾರದ ಮೇಲೆ ಆಂಧ್ರದ ಪ್ರಭಾವ ಇತ್ತು ಎಂದು ಕಾಣುತ್ತದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅಧಿಕಾರ ಸತತವಾಗಿ ನಡೆಯುತ್ತಿದೆ. ಜಯಪ್ರಕಾಶ ನಾರಾಯಣ್ ಮುಂತಾದ ರಿಸರ್ವಾಯರ್‌ಗಳನ್ನು ಕಟ್ಟುತಕ್ಕ ಸಂದರ್ಭದಲ್ಲಿ ಆಂಧ್ರ ಪ್ರದೇಶದಿಂದ ಅಡ್ಡಿ ಆತಂಕವಾಗಿದೆ. ಅಕ್ರಮ ರೀತಿಯಲ್ಲಿ ಸರ್ವೆ ಮಾಡಿಸಿ ಅಡ್ಡಿ ಆತಂಕಪಡಿಸಿದರು.

ಶ್ರೀ ಸಿ. ಬೈರೇಗೌಡ —ಇದು ಪ್ರಶ್ನೋತ್ತರ ವೇಳೆ. ನೀವು ಈ ರೀತಿ ಭಾಷಣ ಮಾಡುತ್ತಾ ಹೋದರೆ ಅನೇಕರ ಪ್ರಶ್ನೆಗಳು ಲ್ಯಾಪ್ಸ್ ಆಗಂತ್ತವೆ.

ಶ್ರೀ ಕೆ. ಲಕ್ಕಪ್ಪ.—ಅಲ್ಲಿ ಅಕ್ರಮವಾಗಿ ನೀರನ್ನು ಉಪಯೋಗಿಸುತ್ತಿದ್ದಾರೆ. ನೀವು ಆಂಧ್ರ ಬಾರ್ಡರ್‌ನಲ್ಲೇನಾದರೂ ಇದ್ದೀರಾ ?

ಶ್ರೀ ಸಿ. ಬೈರೇಗೌಡ.—ನಾವು ಎಲ್ಲೋ ಇದ್ದೇವೆ. ಇದು ಪ್ರಶ್ನೋತ್ತರ ವೇಳೆ.

ಶ್ರೀ ಕೆ. ಲಕ್ಕಪ್ಪ.—ನಮ್ಮ ರಾಜ್ಯದ ಪರ ಇರಬೇಕು. ಆದುದರಿಂದ ತಾವು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಆ ಹಳ್ಳವನ್ನು ಮುಚ್ಚಿಸಿದ್ದೀರಾ ? ಮುಚ್ಚುವುದಕ್ಕೆ ಆರ್ಡರ್ ಕೊಟ್ಟಿದ್ದೀರಾ ಎಂಬುದನ್ನು ತಿಳಿಸಬೇಕು. ಮತ್ತೆ ಅಲ್ಲಿರತಕ್ಕ ಅಧಿಕಾರಿಗಳು ಯಾರು ? ಆ ಅಧಿಕಾರಿ ಗಳ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸುಮಾರು ೪-೫ ತಿಂಗಳಲ್ಲಿ ಆಂಧ್ರ ಮತ್ತು ಕರ್ನಾಟಕದ ಗಡಿ ಗದಲ್ಲಿ ಒಡ್ಡು ಕಟ್ಟಿದ್ದಾರೆ. ಆ ಭಾಗದ ಜಾಗವನ್ನು ಆಂಧ್ರದವರು ನಮ್ಮಿಂದ ಖರೀದಿಗೆ ಕೊಂಡು ಂಡಿದ್ದಾರೆ. ಈ ಪ್ರಶ್ನೆ ತುಮಕೂರು ಜಿಲ್ಲಾ ಪರಿಷತ್ತಿನಲ್ಲಿ ಪ್ರಸ್ತಾವನೆಗೆ ಬಂದು ಜಿಲ್ಲಾ ಪರಿಷತ್ತಿ

ನಇರಂ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನಮ್ಮ ಪ್ರದೇಶದಲ್ಲಿ ಒಡ್ಡನ್ನು ಹಾಕಿದ್ದಾರೆ. ೨–೩ ಕೆರೆಗಳಿಗೆ ಬರುವ ನೀರು ತಪ್ಪುತ್ತಿದೆ ಎಂದು ವರದಿ ಮಾಡಿದ್ದಾರೆ. ಇದು ಅಕ್ರಮ ಎಂಬುದು ನಿರ್ವಿವಾದ. ಈ ದಿಸೆಯಲ್ಲಿ ಪತ್ರಿಕೆಯಲ್ಲಿ ನೋಡಿರಬಹುದು, ತುಮಕೂರು ಜಿಲ್ಲಾಧಿಕಾರಿಗಳು ಆಜ್ಞೆ ಹೊರಡಿಸಿ ಅದನ್ನು ಮುಚ್ಚಬೇಕೆಂದು ಸರ್ಕಾರದ ನಿರ್ದೇಶನದ ಮೇರೆಗೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಆ ಒಡ್ಡನ್ನು ಮುಚ್ಚುತಕ್ಕ ಕೆಲಸ ನಿನ್ನೆಯಿಂದ ಭರದಿಂದ ಸಾಗುತ್ತಿದೆ ಎಂದು ಸಭೆಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಅವರ ಉತ್ತರದಲ್ಲಿ ಹೇಳಿದ್ದಾರೆ, ನಾವು ಆಂಧ್ರ ಸರ್ಕಾರಕ್ಕೆ ಕಾಗದ ಬರೆದಿದ್ದೇವೆ ಎಂದು.

ಅಧ್ಯಕ್ಷರು.—ಒಡ್ಡನ್ನು ಮುಚ್ಚುತಕ್ಕ ಕೆಲಸ ನಿನ್ನೆಯಿಂದ ಭರದಿಂದ ಸಾಗುತ್ತಿದೆ ಎಂದು ಈಗ ಹೇಳುತ್ತಿದ್ದಾರಲ್ಲ.

ಶ್ರೀ ಕೆ. ಲಕ್ಕಪ್ಪ —ಎಚ್ಚರಿಕೆ ಕೊಟ್ಟು ಕಾಗದ ಬರೆದಿದ್ದೇವೆಂದು ಹೇಳಿದ್ದಾರೆ. ಆ ಕಾಗದದಲ್ಲಿ ಏನು ಬರೆದಿದ್ದಾರೆಂಬುದನ್ನು ಸಭೆಯ ಗಮನಕ್ಕೆ ತರಬೇಕು. ಖಾರವಾಗಿ ಬರೆದಿದ್ದಾರೆಯೆ ? ಅಥವಾ ಹೇಗೆ ವ್ಯಾಖ್ಯಾನ ಮಾಡಿದ್ದಾರೆಂಬುದು ಬೇಕು. ಇಂಥ ಪರಿಸ್ಥಿತಿಯಲ್ಲಿ ಆಂಧ್ರ ಪ್ರದೇಶಕ್ಕೆ ಸರಿಯಾದ ರೀತಿಯಲ್ಲಿ ಜವಾಬು ಕೊಡಬೇಕಾಗುತ್ತದೆ. ಎಲ್ಲಾ ಕಡೆ ಧಾಳಿ ನಡೆಸುವುದಕ್ಕೆ ಬಾರ್ಡರ್‌ನಲ್ಲಿ ಪ್ರಯತ್ನ ನಡೆಯುತ್ತಿದೆ. ಈ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು. The Executive Engineer, Madhugiri Sub–division has not taken any action. Why has he not taken any action ? After the matter appeared in the Press, he has initiated action. I want to know what action the Government is going to take against that Executive Engineer. Why have they not reported the matter to the Government ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಸ್ವಾಮಿ, ಸದಸ್ಯರು ಕೊಟ್ಟಂಥ ಸಲಹೆಯನ್ನು ನಾವು ಪರಿಶೀಲಿಸುತ್ತೇವೆ. ಅಧಿಕಾರಿಗಳ ನಿರ್ಲಕ್ಷ್ಯತೆಗೆ ಕ್ರಮ ತೆಗೆದುಕೊಳ್ಳುವುದರಲ್ಲಿ ನಾವು ಹಿಂಜರಿಯುವುದಿಲ್ಲ ಎಂದು ತಿಳಿಸುತ್ತಾ ಆಂಧ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರತಿಭಟನಾ ಪತ್ರವನ್ನು ಈ ಸಭೆಗೆ ಕೊಡಬೇಕೆಂದು ಕೇಳಿದ್ದಾರೆ. ಅದನ್ನು ಮಾನ್ಯ ಸದಸ್ಯರಿಗೆ ತೋರಿಸುವುದಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ತೋರಿಸುವುದಲ್ಲ. ಇದು ಬಹಳ ಮುಖ್ಯವಾದ ಪ್ರಶ್ನೆ. ಆ ಕಡೆಗಳಲ್ಲಿ ಗಡಿ ಸಮಸ್ಯೆ ಉದ್ಭವವಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಅಧ್ಯಕ್ಷರೇ: ಇರಿಗೇಷನ್ ಆಕ್ಟ್ ಮತ್ತು ಲ್ಯಾಂಡ್ ರೆವಿನ್ಯೂ ಆಕ್ಟ್ ಪ್ರಕಾರ ನೀರನ್ನು ಅಕ್ರಮವಾಗಿ ಬೇರೆ ಕಡೆ ಡೈವರ್ಟ್ ಮಾಡಿದರೆ ಕಾನೂನು ಪ್ರಕಾರ ತಪ್ಪಾಗುವುದಿಲ್ಲವೇ ? ತಪ್ಪಾದರೆ ಈಗಲಾದರೂ ಸರ್ಕಾರವೇ ಮಾಡಿರಲಿ ಖಾಸಗಿಯವರೇ ಮಾಡಿರಲಿ ಅದು ಕ್ರಿಮಿನಲ್ ಆಫೆನ್ಸ್ ಆಗುವುದರಿಂದ ಪೋಲೀಸ್ ಕಂಪ್ಲೇಂಟ್ ಕೊಟ್ಟು ಅವರನ್ನು ಕೋರ್ಟಿಗೆ ಎಳೆಯುತಕ್ಕ ಪ್ರಯತ್ನ ಸರ್ಕಾರ ಮಾಡುತ್ತದೆಯೇ ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—ಅದನ್ನು ಪರಿಶೀಲಿಸಲಾಗುತ್ತದೆ.

ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ನಿಟ್ಟೂರ (ಬಿ) ಗ್ರಾಮದ ಹತ್ತಿರ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಇರುವ ಬ್ರಿಡ್ಜನ್ನು ಅಗಲಗೊಳಿಸುವ ಬಗ್ಗೆ

೨೬೧. ಶ್ರೀ ವಿಜಯಕುಮಾರ್ ಖಂಡ್ರೆ (ಭಾಲ್ಕಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನಲ್ಲಿ ನಿಟ್ಟೂರ (ಬಿ) ಗ್ರಾಮದ ಹತ್ತಿರ ಜಿಲ್ಲಾ ಮುಖ್ಯ ರಸ್ತೆಯ ಮೇಲೆ ಇರುವ ಬ್ಯಾರೇಜ್ ಕಮ್ ಬ್ರಿಡ್ಜನ್ನು ಅಗಲಗೊಳಿಸುವ ಕಾರ್ಯವನ್ನು ಮಂಜೂರು ಮಾಡುವ ಕುರಿತು ಸರಕಾರಕ್ಕೆ ಮನವಿ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಕೆಲಸವನ್ನು ಮಂಜೂರು ಮಾಡಲು ಮತ್ತು ಶೀಘ್ರದಲ್ಲಿ ಪ್ರಾರಂಭಿಸಲು ತೆಗೆದುಕೊಂಡಿರುವ ಕ್ರಮಗಳೇನು ?